**O.S. 49-24** **DW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 16.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ A V B, ವಕೀಲರಿಂದಃ**

3. ನಾನು, ವಾದಿ - ಪ್ರತಿವಾದಿಗಳ ಹೆಸರು ನೋಡಿಕೊಂಡಿದ್ದೇನೆ. ಭರಮಪ್ಪನಿಗೆ ಅರವಿಂದ ಅಜೆಯಕುಮಾರ ಶ್ರೀಕಾಂತ, ಶ್ರೀಧರ ಅಲ್ಲದೆ ವೀಣಾ ಎಂಬ ಮಗಳಿದ್ದಾಳೆ. ಕೆ ಐ ಡಿ ಬಿ ಐ ರವರು ನಮ್ಮ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಾಗ ಉತಾರದಲ್ಲಿ ನಮ್ಮ ತಂದೆ, ಚಿಕ್ಕಪ್ಪ ಹಾಗೂ ದೊಡ್ಡಪ್ಪ ರವರ ಹೆಸರುಗಳಿದ್ದವು. ವಂಶಾವಳಿಯಲ್ಲಿ ತೋರಿಸಿದ ವ್ಯಕ್ತಿಗಳ ಹೆಸರುಗಳು ಇದ್ದವು. ಕೆ ಐ ಡಿ ಬಿ ಯವರು ನಮ್ಮ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಅಂದರೆ ಸರಿ. ಭೂ-ಸ್ವಾಧೀನವಾದ ನಂತರ ನಮ್ಮ ತಂದೆಗೆ ಉಳಿದ 3 ಜನ ಸಹೋದರರು ಜಿ ಪಿ ಎ ಬರೆದುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಂದೆ ಎಲ್ ಎ ಸಿ ಕೇಸ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಶನ್ ಜಿ ಪಿ ಎ ಆಧಾರದ ಮೇಲೆನಡೆಸಿದ್ದಾರೆ ಅಂದರೆ ಸರಿಯಲ್ಲ. ಎಂ ಎಫ್ ಎ ನಂಃ 25602/2011 ರಲ್ಲಿ ನಮ್ಮ ತಂದೆ ಜಿ ಪಿ ಎ ಆಧಾರದ ಮೇಲೆ ಹಾಜರಾಗಿದ್ದಾರೆ ಅಂದರೆ ಸರಿಯಲ್ಲ. ಅವರವರು ಮಾತನಾಡಿಕೊಂಡು ಅಧಿಕಾರ ಕೊಟ್ಟಿದ್ದರು. ಅವರು ಕೊಟ್ಟ ಅಧಿಕಾರದ ಮೇಲೆ ನಮ್ಮ ತಂದೆ ಕೇಸ ನಡೆಸಿದ್ದಾರೆ ಅಂದರೆ ಸರಿ. ಯುನಿಯನ್ ಬ್ಯಾಂಕದಲ್ಲಿ A/c. No. 520101260111011493 ನೇದ್ದನ್ನು ಜಂಟಿಯಾಗಿ ಖಾತೆ ತೆಗೆದಿದ್ದಾರೆ ಅಂದರೆ ಸರಿ. ಸದರಿ ಖಾತೆಯನ್ನು ನಮ್ಮ ತಂದೆ ನೋಡಿಕೊಳ್ಳುತ್ತಿದ್ದರು ಅಂದರೆ ಸರಿಯಲ್ಲ. ಯುನಿಯನ್ ಬ್ಯಾಂಕಿನ ಸ್ಟೇಟಮೆಂಟ ಆಫ್ ಅಕೌಂಟದಲ್ಲಿ ನಮ್ಮ ತಂದೆ ಅಕೌಂಟ ನೋಡಿಕೊಳ್ಳುತ್ತಿದ್ದರೆಂದು ಬರೆಯಲಾಗಿದೆ ಅಂದರೆ ಸರಿಯಲ್ಲ. ಎಲ್ಲರೂ ಸದರಿ ಅಕೌಂಟದಲ್ಲಿ ವ್ಯವಹಾರ ಮಾಡಲು ನಮ್ಮ ತಂದೆಗೆ ಅಧಿಕಾರ ನೀಡಿದ್ದರು ಅಂದರೆ ಸರಿಯಲ್ಲ. ಎಲ್ಲರೂ ಸೇರಿ ವಹಿವಾಟು ಮಾಡುತ್ತಿದ್ದರು. ಬ್ಯಾಂಕಿನ ಸ್ಟೇಟಮೆಂಟ ಆಫ್ ಅಕೌಂಟ ಹಾಜರಪಡಿಸಲು ತೊಂದರೆ ಇಲ್ಲ. ನಾನು ಮುಂದಿನ ದಿನಾಂಕಕ್ಕೆ ಹಾಜರಪಡಿಸಲು ಆಗುವುದಿಲ್ಲ. ನಮ್ಮ ತಂದೆ ಸದರಿ ಖಾತೆ ನೋಡಿಕೊಳ್ಳುತ್ತಿದ್ದುದ್ದರಿಂದ ವಾದಿಗಳಿಗೆ ಮೋಸ ಮಾಡಲು ಅದನ್ನು ಹಾಜರಪಡಿಸುವುದಿಲ್ಲವೆಂದು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**O.S. 49-24** **DW-2**

4. ಪರಿಹಾರದ ಹಣ ಮೇಲೆ ಹೇಳಿದ ಖಾತೆಗೆ ರೂ. 14,61,42,284/- ಗಳು ಬಂದಿದೆ ಅಂದರೆ ಸರಿ. ಇದಲ್ಲದೇ ಬೇರೆ ಹಣ ಸಹ ಬಂದಿದೆ. ನಿಖರವಾಗಿ ಎಷ್ಟು ಹಣ ಬಂದಿದೆ ಎಂದು ಹೇಳಲಾಗುವುದಿಲ್ಲ. ಅಂದಾಜು ಸಹ ಹೇಳಲು ಆಗುವುದಿಲ್ಲ. ಮೇಲೆ ಹೇಳಿದ ಪರಿಹಾರದ ಹಣ ಅಲ್ಲದೆ ಬೇರೆ ಹಣ ಬಂದ ಬಗ್ಗೆ ಲೆಕ್ಕವಿಲ್ಲ. ಅವರವರೆ ಕುಳಿತು ಬಗೆಹರಿಸಿಕೊಂಡಿರುತ್ತಾರೆ. ಮತ್ತೇನಾದರೂ ಮಾತನಾಡಿದ್ದಾರೆಂದು ಗೊತ್ತಿಲ್ಲ. ಪರಿಹಾರದ ಹಣದಲ್ಲಿ 2,44,87,000/- ಗಳನ್ನು ಹಂಚಿಕೊಳ್ಳೋಣ ಉಳಿದ ಹಣದಲ್ಲಿ ಆಸ್ತಿ ಖರೀದಿ ಮಾಡಿದರೆ ಆದಾಯ ತೆರಿಗೆ ಉಳಿಯುತ್ತದೆ ಅಂತಾ ಮಾತುಕತೆಯಾಗಿದೆ ಅಂದರೆ ಸರಿಯಲ್ಲ. ಅದೇ ರೀತಿ ಆಸ್ತಿ ಖರೀದಿ ಮಾಡಿ 4 ಜನ ಹಂಚಿಕೆ ಮಾಡಿಕೊಳ್ಳಲು ಮಾತುಕತೆಯಾಯಿತು ಅಂದರೆ ಸರಿಯಲ್ಲ. ಜಂಟಿ ಖಾತೆಯಿಂದ ಯಾರ ಯಾರ ಖಾತೆಯಿಂದ ಎಷ್ಟು ಹಣ ಹೋಗಿದೆ ಎಂದು ಬ್ಯಾಂಕ ಖಾತೆಯಲ್ಲಿ ಸಿಗುತ್ತದೆ ಅಂದರೆ ಸರಿ. ನಮ್ಮ ತಂದೆ ಖಾತೆಗೆ 7,00,48,560/- ರೂ. ಗಳು ಬಂದಿದೆ ಅಂದರೆ ಸರಿ. ಅವರೆ ಕುಳಿತುಕೊಂಡು ಖರ್ಚು ಸಾಲ ಅಂತಾ ಜಮಾ ಮಾಡಿದ್ದಾರೆ. ಆ ರೀತಿ ಎಲ್ಲಿಯೂ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ ಅಂದರೆ ಸರಿ. ಮಾತಿನ ಪ್ರಕಾರ ದಾವಾ ಆಸ್ತಿಗಳನ್ನು ನಮ್ಮ ತಂದೆ ಖರೀದಿ ಮಾಡಿದರು ಅಂದರೆ ಸರಿಯಲ್ಲ. ನಮ್ಮ ತಂದೆ ಎ - ಹಾಗೂ ಬಿ ಶೆಡ್ಯೂಲ್ ಆಸ್ತಿಗಳನ್ನು ಪರಿಹಾರ ಹಣದಿಂದ ಖರೀದಿ ಮಾಡಿದರು ಅಂದರೆ ಸರಿಯಲ್ಲ. ಜಂಟಿ ಹಣದಿಂದ ದಾವಾ ಆಸ್ತಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. ವಾದಿಗಳು ಹಾಗೂ ಪ್ರತಿವಾದಿ 6 ರಿಂದ 8 ರವರು ನಮ್ಮ ತಂದದೆ ಅ ಅಭಿಮಾನ ಇತ್ತು ಅಂದರೆ ಸರಿ. ನಮ್ಮ ದೊಡ್ಡಪ್ಪ ಮೋಸ ಮಾಡುವುದಿಲ್ಲವೆಂದು ಆತ್ಮ ವಿಶ್ವಾಸವಿತ್ತು ಅಂದರೆ ಸರಿ. ಅಣ್ಣ - ತಮ್ಮಂದಿರು ವಿಶ್ವಾಸದಿಂದ ನಡೆದುಕೊಂಡು ಬಂದಿದ್ದರು ಅಂದರೆ ಸರಿ. ನಮ್ಮ ತಂದೆಗೆ ಕ್ಯಾನ್ಸರ ಆಗಿತ್ತು ಅಂದರೆ ಸರಿ. ನವೆಂಬರ 2022 ರಲ್ಲಿ ಕ್ಯಾನ್ಸರ ಪತ್ತೆಯಾಗಿರಲಿಲ್ಲ. ಗಂಟು ಆಗಿತ್ತು. ಡಿಸೆಂಬರ 203 ರಲ್ಲಿ ವಾದಿಗಳು ನಮ್ಮ ತಂದೆಗೆ ಆಸ್ತಿ ವಿಭಜನೆ ಮಾಡಿಕೊಡಿ ಎಂದು ಕೇಳಿದರು ಅಂದರೆ ಸರಿಯಲ್ಲ. ಡಿಸೆಂಬರ 2023 ರಲ್ಲಿ ವಾದಿಗಳು ನಮ್ಮ ತಂದೆ ಬಳಿ ಬಂದು, ನಿನಗೆ ಕ್ಯಾನ್ಸರ ಆಗಿದೆ ಜಂಟಿ ಹಣದಿಂದ ಖರೀದಿ ಮಾಡಿದ ಆಸ್ತಿಗಳನ್ನು ಪಾಲು ಮಾಡಿಕೊಡು, ನಿನ್ನ ಮಕ್ಕಳು ಪಾಲು ಕೊಡುವುದಿಲ್ಲವೆಂದು ಕೇಳಿದರು ಅಂದರೆ ಸರಿಯಲ್ಲ. ವಾದಿಗಳು ಕೇಳಿದ್ದಕ್ಕೆ ನಮ್ಮ ತಂದೆ ದಿನಗಳನ್ನು ದೂಡುತ್ತಾ ಬಂದಾಗ ವಾದಿಗಳು ದಾವೆ ಸಲ್ಲಿಸಿದರು ಅಂದರೆ ಸರಿಯಲ್ಲ. ಜಂಟಿ ಹಣ 4 ಕೋಟಿ 81 ಲಕ್ಷ ರೂ. ದಿಂದ ದಾವಾ - ಎ ಹಾಗೂ ಬಿ ಶೆಡ್ಯೂಲ್ ಆಸ್ತಿಗಳನ್ನು ಖರೀದಿ ಮಾಡಿದ್ದರಿಂದ ವಾದಿಗಳಿಗೆ ಹಕ್ಕು ಇದೆ ಅಂದರೆ ಸರಿಯಲ್ಲ.

**O.S. 49-24** **DW-2**

4 ಕೋಟಿ 81 ಲಕ್ಷ ರೂ. ಗಳು ಜಂಟಿ ಹಣ ನಮ್ಮ ತಂದೆ ಖಾತೆಯಲ್ಲಿತ್ತು ಅಂದರೆ ಸರಿಯಲ್ಲ. ಆಸ್ತಿಗಳನ್ನು ಖರೀದಿ ಮಾಡಲು ಸರಕಾರ ಕೆಲವೊಂದು ವಿನಾಯಿತಿ ನೀಡಿರುತ್ತಾರೆ ಅಂದರೆ ಸರಿ. ಸದರಿ ವಿನಾಯಿತಿಗಳನ್ನು ದಾವಾ ಆಸ್ತಿಗಳನ್ನು ಖರೀದಿ ಮಾಡಲು ಉಪಯೋಗ ಮಾಡಿರುತ್ತೇವೆ ಅಂದರೆ ಸರಿ. ದಾವಾ ಆಸ್ತಿಗಳನ್ನು ಖರೀದಿ ಮಾಡಲು ವಾದಿಗಳು ತಕರಾರು ಮಾಡಿಲ್ಲ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ ವಾದಿಗಳು ಸಹ ಕೆಲವೊಂದು ಆಸ್ತಿಗಳನ್ನು ಖರೀದಿ ಮಾಡಿದ್ದಾರೆಂದು ಹೇಳುತ್ತಾರೆ. 4 ಕೋಟಿ 81 ಲಕ್ಷ ರೂ. ಗಳ ನಮ್ಮ ಖಾತೆಯಲ್ಲಿರುವ ಜಂಟಿ ಹಣದಿಂದ ದಾವಾ ಆಸ್ತಿಗಳನ್ನು ಖರೀದಿ ಮಾಡಿದ್ದೇವೆ ಅಂದರೆ ಸರಿಯಲ್ಲ.

5. ನಮ್ಮ ತಂದೆ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ನೋಡಿದ್ದೇನೆ. ಅದರಲ್ಲಿ ನಮ್ಮ ತಂದೆ ಏನೇನು ಬರೆಸಿದ್ದಾರೆಂದು ಗೊತ್ತು.

**ಮುಂದಿನ ಪಾಟಿ ಸವಾಲಿಗೆ ಪ್ರಕರಣ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.